**CC No. 669/2023**
**PW: 1**

**ಇಂದು ದಿ: 07-05-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ನಾನು ಈ ಪ್ರಕರಣದಲ್ಲಿ ದೂರುದಾರರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರಗಳನ್ನು ಸಲ್ಲಿಸಿರುತ್ತೇನೆ, ಅದರಲ್ಲಿ ಇರುವ ವಿಷಯಗಳು ಸತ್ಯವಾಗಿದ್ದು ಅದನ್ನು ನಾನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ಗುರುತಿಸಲು ಕೇಳಿಕೊಳ್ಳುತ್ತೇನೆ.

ನಿಪಿ-1 : ಚೆಕ್ ನಂ.**644990** ದಿನಾಂಕ: 26-04-2022
ನಿಪಿ-2 : ಬ್ಯಾಂಕ್ ಸ್ಲಿಪ್ ದಿಃ 26.04.2022.
ನಿಪಿ-3 : ಬ್ಯಾಂಕರವರು ನೀಡಿರುವ ಒಂದು ಹಿಂಬರಹ.
ನಿಪಿ-4 : ಲೀಗಲ್ ನೋಟಿಸ್ ದಿ.01-06-2022.
ನಿಪಿ-5 : ಅಂಚೆ ರಸೀದಿ.
ನಿಪಿ-6 : ಅಂಚೆ ಸ್ವೀಕೃತಿ ಪತ್ರ.
ನಿಪಿ-7 : ಪ್ರಾಮಿಸರಿ ನೋಟ್ ದಿಃ25.06.2020.
ನಿಪಿ7 ಕ್ಕೆ ಆರೋಪಿಯು ಸಹಿ ಮಾಡಿರುತ್ತಾರೆ. ಸಾಕ್ಷಿಯು ನಿಪಿ 7 ರಲ್ಲಿ ಆರೋಪಿಯ ಸಹಿ ನೋಡಿ ಗುರುತಿಸಿದ್ದು, ಸದರಿ ಸಹಿಗಳನ್ನು ನಿಪಿ7(ಎ) ಮತ್ತು ನಿಪಿ7(ಬಿ) ಎಂದು ಗುರುತಿಸಲಾಯಿತು.

ಆದುದರಿಂದ ನನ್ನ ದೂರನ್ನು ಮಾನ್ಯ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಯು.ವಿ.ಪಿ ವಕೀಲರಿಂದಃ</u>**

ನಾನು Real Estate ವ್ಯವಹಾರ ಮಾಡುತ್ತೇನೆ. ನನ್ನ ದೂರಿನಲ್ಲಿ ಮತ್ತು ನನ್ನ ಪ್ರಮಾಣ ಪತ್ರದಲ್ಲಿ ನಾನು ಗುತ್ತಿಗೆದಾರನಾಗಿರುತ್ತೇನೆ ಎಂದು ಬರೆದಿರುತ್ತೇನೆ ಎಂದರೆ ಸಾಕ್ಷಿಯು ಮೊದಲು ಗುತ್ತಿಗೆದಾರನಾಗಿ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ.

ನಾನು ಆರೋಪಿಗೆ ರೂ.4,65,000/- ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ನಾನು ಆದಾಯ ತೆರಿಗೆ ಕಟ್ಟುತ್ತೇನೆ. ಈ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಮಾಡಿರುವುದಿಲ್ಲ. ಆರೋಪಿಯು ದಿಃ20.01.2018 ರಂದು ನನ್ನ ಕಡೆಯಿಂದ ರೂ.7 ಲಕ್ಷ ಸಾಲ ಪಡೆದಿರುತ್ತಾರೆ ಎಂದರೆ ಸರಿ. ಅದೇ ದಿನ ಆರೋಪಿಯು ನನಗೆ ಎರಡು ಚೆಕ್‌ಗಳನ್ನು ಕೊಟ್ಟಿರುತ್ತಾರೆ ಅದರ ನಂಬರ್ 644989 ಮತ್ತು 644990 ಆಗಿರುತ್ತವೆ ಎಂದರೆ ಸರಿ.

ದಿಃ26.02.2018 ರಂದು ಆರೋಪಿಯು ಮತ್ತೇ ನನ್ನ ಬಳಿ ರೂ.5 ಲಕ್ಷ ಸಾಲ ಪಡೆದಿರುತ್ತಾರೆ ಎಂದರೆ ಸರಿ. ಅದೇ ದಿನ ಆರೋಪಿಯು ನನಗೆ ನೋಂದಾಯಿತ ಕ್ರಯದ ಕರಾರು ಪತ್ರ ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ರೂ.5 ಲಕ್ಷ ಆರೋಪಿ ನನಗೆ ವಾಪಸ್ಸು ಕೊಟ್ಟಾಗ ನಾನು ಅವರಿಗೆ ನೋಂದಾಯಿತ ವಿಕ್ರಯ ಅಗ್ರಿಮೆಂಟ್ ರದ್ದು ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಡಿ-1 ಎಂದು ಗುರುತಿಸಲಾಯಿತು.

ದಿಃ25.06.2020 ರಲ್ಲಿ ನಾನು ಆರೋಪಿಯಿಂದ ರೂ.6 ಲಕ್ಷ ಹಣವನ್ನು

ಪಡೆದು ಅವರ ಪುಸ್ತಕದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ.

ದಿಃ28.03.2018 ರಿಂದ ದಿಃ19.03.2019 ರವರೆಗೆ ನಾನು ಆರೋಪಿ ಕಡೆಯಿಂದ ರೂ.3 ಲಕ್ಷವನ್ನು ಹಿಂಪಡೆದಿರುತ್ತೇನೆ ಎಂದರೆ ಸರಿ.

ದಿಃ26.06.2020 ರಂದು ನಾನು ಆರೋಪಿ ಕಡೆಯಿಂದ ರೂ.6 ಲಕ್ಷ ಹಿಂಪಡೆದಿರುತ್ತೇನೆ ಎಂದರೆ ಸರಿ. ಆರೋಪಿಯು ಒಟ್ಟು ರೂ.13 ಲಕ್ಷ ಬಡ್ಡಿ ಸೇರಿಸಿ ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ದಿಃ10.04.2023 ರಂದು ಆರೋಪಿಯು ತನ್ನ ಖಾತೆಯಿಂದ ಯಾವುದೇ ಹಣ ಹೋಗಬಾರದು ಎಂದು ಬ್ಯಾಂಕಿಗೆ ಅರ್ಜಿ ಕೊಟ್ಟು ತನ್ನ ಖಾತೆಯನ್ನು ಮುಚ್ಚಿರುತ್ತಾರೆ ಎಂದರೆ ಸಾಕ್ಷಿಯು ಇದರ ಮುಂಚಿತವಾಗಿ ನಾನು ಚೆಕ್ ನ್ನು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಆರೋಪಿ ನನ್ನ ಮನೆಯಲ್ಲಿ ಬಾಡಿಗೆಯಲ್ಲಿ ಇದ್ದರು ಎಂದರೆ ಸರಿ. ಆರೋಪಿಯು ಮನೆಯನ್ನು ಸ್ವಲ್ಪ ರಿಪೇರಿ ಇದೆ ಎಂದು ಹೇಳಿದ ಮೇರೆಗೆ ನಾನು ಅವರಿಗೆ ನೀನು ಮಾಡಿಸು ನಾನು ದುಡ್ಡು ಕೊಡುತ್ತೇನೆ ಎಂದು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ರಿಪೇರಿ ಮಾಡಿಸಿದ ಹಣ ರೂ.2,50,000/- ಮನೆ ಬಾಡಿಗೆ ಖಾಲಿ ಮಾಡುವ ಕಾಲಕ್ಕೆ ಅವರು ನನಗೆ ಕೇಳಿದಾಗ, ಈ ಬಗ್ಗೆ ನಮ್ಮ ನಡುವೆ ವೈಮನಸ್ಸು ಆಗಿದ್ದು, ಹಾಗಾಗೀ ನಾನು ಅವರ ವಿರುದ್ದ ಈ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಲ ಕೊಡುವ ಕಾಲಕ್ಕೆ ನಾನು ಆರೋಪಿಯಿಂದ ಬಿಳಿ ಹಾಳೆಯ ಮೇಲೆ

ಸಹಿ ಪಡೆದು ಮತ್ತು ಅವರು ಕೊಟ್ಟ ಚೆಕ್‌ನ್ನು ಉಪಯೋಗಿಸಿ ಪ್ರಾಮಿಸರಿ ನೋಟ್‌ನ್ನು ಸೃಷ್ಟಿ ಮಾಡಿ ಈ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

(**ಮುಂದುವರೆದ ಪಾಟೀ ಸವಾಲಿಗೆ ಸಮಯಾಕಾಶ ಕೋರಿದ್ದು, ಅನುಮತಿಸಲಾಯಿತು**.)

( ಈ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಲ್ಲಿ ಹೇಳಿ ಬೆರಳಚ್ಚು ಮಾಡಿಸಲಾಯಿತು )

ಓ. ಹೆ. ಕೆ.ಸರಿ ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.